ಅನುಬಂಧ

2001-02ನೇ ಸಾಲಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನ ಕೆರೆಗಳಿಗೆ ಒದಗಿಸಿರುವ ಅನುದಾನದ ವಿವರಗಳು

| ಕ್ರಮ.ಸಂ. | ಕಾಮಗಾರಿಯ ಹೆಸರು | ಅನುದಾನ |
|---|---|---|
| | 1. ಕೆರೆ ಕಲ್ಯಾಣ | |
| 1. | ಕೋಳೂರು ಕೆರೆ ಕಲ್ಯಾಣ | 0.10 |
| 2. | ತಲಗವಾರ ಕೆರೆ ಅಭಿವೃದ್ಧಿ | 0.10 |
| 3. | ಅಣಬೆ ಕೆರೆಯ ದುರಸ್ತಿ | 0.10 |
| 4. | ಹಾದ್ರಿಪುರ ಕೆರೆಯ ದುರಸ್ತಿ | 0.50 |
| 5. | ಸೊಣ್ಣೇನಹಳ್ಳಿ ಕೆರೆಯ ಕೋಡಿ ಮುಂದೆ ಡ್ರಾಪ್ಟ್ ನಿರ್ಮಾಣ | 0.10 |
| 6. | ಚಿಕ್ಕಹೆಜ್ಜಾಜಿ ಕೆರೆ ಮತ್ತು ಕಾಲುವೆ ಅಭಿವೃದ್ಧಿ | 0.60 |
| 7. | ಲಿಂಗನಹಳ್ಳಿ ಕೆರೆ, ಕಾಲುವೆ ಅಭಿವೃದ್ಧಿ | 0.50 |
| 8. | ಮಾಜೇನಹಳ್ಳಿ ಕೆರೆಯ ಕೋಡಿ ಕಾಲುವೆ ದುರಸ್ತಿ | 0.50 |
| | | 2.50 |
| | 11. ಕೆರೆಗಳ ಹೂಳು ತೆಗೆಯುವುದು | |
| 1. | ಲಕ್ಷ್ಮೀದೇವರಪುರ ಕೆರೆಯ ಹೊಳೆತ್ತುವುದು | 0.50 |
| | | 0.50 |
| | 111. ಆಧುನೀಕರಣ | |
| 1. | ಗುಂಡಂಗೆರೆ ಕೆರೆಯ ಆಧುನೀಕರಣ | 4.00 |
| | | 4.00 |

ರಾಜ್ಯ ವಿದ್ಯುತ್ ಪ್ರಸರಣಾ ನಿಗಮವು ಗ್ರಾಹಕರಿಂದ ಠೇವಣಿ ಹಣ ಸಂಗ್ರಹಿಸುತ್ತಿರುವುದು.

350(639) -ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಹಕರಿಂದ ಹೆಚ್ಚುವರಿಯಾಗಿ 3 ತಿಂಗಳ ಠೇವಣಿ ಹಣವನ್ನು ವಿದ್ಯುತ್ ಪ್ರಸರಣಾ ನಿಗಮ ಸಂಗ್ರಹಿಸುತ್ತಿರುವುದು ನಿಜವೇ;

ಅ) ಈವರೆಗೆ ಎಷ್ಟು ಹಣವನ್ನು ಸಂಗ್ರಹಿಸಲಾಗಿದೆ. (ಜಿಲ್ಲಾವಾರು ಮಾಹಿತಿ ನೀಡುವುದು;

ಇ) ಗ್ರಾಹಕರಿಂದ ಸಂಗ್ರಹಿಸುತ್ತಿದ್ದ 3 ತಿಂಗಳ ಹೆಚ್ಚುವರಿ ಠೇವಣಿ ಹಣವನ್ನು ಹಿಂದಿರುಗಿಸುವಂತೆ ಆಯೋಗವು ಆದೇಶ ನೀಡಿರುವುದು ನಿಜವೇ;

ಈ) ಆಯೋಗದ ಆದೇಶವನ್ನು ಪಾಲಿಸಲಾಗಿದೆಯೇ; ಎಷ್ಟು ಹಣವನ್ನು ಹಿಂದಿರುಗಿಸಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು)?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) 31.3.2002 ರವರೆಗೆ ಸಂಗ್ರಹಿಸಲಾದ ಮೊಬಲಗು ರೂ. 19.5, 37,36, 418-00. ಜಿಲ್ಲಾವಾರು ವಿವರ ಈ ರೀತಿ ಇದೆ.

| ಕ್ರಮ ಸಂ. | ಜಿಲ್ಲೆ (ರೂ.ಗಳಲ್ಲಿ) | ಮೊತ್ತ |
|---|---|---|
| 1. | ಬೆಂಗಳೂರು ನಗರ | 110,22,82,017-82 |
| 2. | ಬೆಂಗಳೂರು ಗ್ರಾಮೀಣ | 24,44,557-00 |
| 3. | ಕೋಲಾರ | 1,81,81,750-00 |
| 4. | ತುಮಕೂರು | 4,24,29,351-00 |
| 5. | ಮಂಡ್ಯ | 2,28,20,178-00 |
| 6. | ಮೈಸೂರು | 12,53,76,616-40 |
| 7. | ಚಾಮರಾಜ ನಗರ | 28,49,682-00 |
| 8. | ಹಾಸನ | 3,89,48,926-40 |
| 9. | ಮಡಿಕೇರಿ | 1,27,98,185-00 |
| 10. | ದಕ್ಷಿಣ ಕನ್ನಡ | 5,27,84,239-00 |
| 11. | ಉಡುಪಿ | 10,11,71,452-50 |
| 12. | ಶಿವಮೊಗ್ಗ | 7,02,38,906-29 |
| 13. | ಚಿಕ್ಕಮಗಳೂರು | 21,04,04,604-00 |
| 14. | ಧಾರವಾಡ | 6,53,12,514-50 |
| 15. | ಗದಗ್ | 2,32,79,206-66 |
| 16. | ಹಾವೇರಿ | 3,79,93,925-54 |

| 1 | 2 | 3 |
|---|---|---|
| 17. | ಚಿತ್ರದುರ್ಗ | 1,78,63,150-00 |
| 18. | ದಾವಣಗೆರೆ | 3,47,23,571-76 |
| 19. | ಉತ್ತರ ಕನ್ನಡ | 2,95,51,904-00 |
| 20. | ಬೆಳಗಾಂ | 22,02,40,341-00 |
| 21. | ಬಿಜಾಪುರ | 1,09,47,446-00 |
| 22. | ಬಾಗಲಕೋಟೆ | 1,28,87,580-00 |
| 23. | ಗುಲ್ಬರ್ಗಾ | 15,05,52,291-00 |
| 24. | ಬೀದರ್ | 22,59,69,410-00 |
| 25. | ರಾಯಚೂರು | 74,51,529-00 |
| 26. | ಕೊಪ್ಪಳ | 81,81,279-00 |
| 27. | ಬಳ್ಳಾರಿ | 8,94,57,546-00 |

ಆ) 3 ತಿಂಗಳ ಠೇವಣಿ ಮೊತ್ತವು 120 ಗಳಿಗಿಂತ ಹೆಚ್ಚಾಗಿದ್ದಲ್ಲಿ ಹೆಚ್ಚುವರಿ ಠೇವಣಿ ಮೊತ್ತವನ್ನು ಹಿಂದಿರುಗಿಸುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿರ್ದೇಶಿಸಿದೆ.

ಈ) ಈ ಬಗ್ಗೆ ಗ್ರಾಹಕರಿಂದ ಮನವಿ ಬಂದ ನಂತರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

## ರಾಜ್ಯದಲ್ಲಿ "ಡಿ" ದರ್ಜೆ ನೌಕರರ ನೇಮಕಾತಿ

352(641) - ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಲಕ್ಷ್ಮಯ್ಯ) (ತುರುವೇಕೆರೆ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನೇಕ ಸಾವಿರ 'ಡಿ' ಗುಂಪಿನ ಹುದ್ದೆಗಳು ಖಾಲಿ ಇರುವುದು ಸರ್ಕಾರಕ್ಕೆ ಗೊತ್ತಿದೆಯೇ;

ಆ) ಎಷ್ಟು ವರ್ಷಗಳಿಂದ ಈ ವರ್ಗದ ನೌಕರರನ್ನು ನೇಮಿಸಿಲ್ಲ, ಕಾರಣವೇನು;

ಇ) 'ಡಿ' ಗುಂಪಿನ ನೌಕರರು ಇಲ್ಲದೇ ಸರ್ಕಾರಿ ಕಛೇರಿಗಳು ಹಾಗೂ ಅನೇಕ ಸಂಸ್ಥೆಗಳಲ್ಲಿ ಕೆಲಸ ಮಾಡಲು ತೊಂದರೆಯಾಗುತ್ತಿಲ್ಲವೆ;

ಈ) ಹಾಗಿದ್ದಲ್ಲಿ ನೇಮಕಾತಿ ಮಾಡಿಕೊಳ್ಳಲು ಇರುವ ತೊಂದರೆ ಏನು;

ಉ) ಸರ್ಕಾರಕ್ಕೆ ಆರ್ಥಿಕ ಮುಗ್ಗಟ್ಟಿನಿಂದ ನೇಮಕಾತಿ ಸಾಧ್ಯವಿಲ್ಲವೆ?